## ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ವಲಯ ದಕ್ಷಿಣ**

**ಬೈರಸಂದ್ರ, ವಾರ್ಡ್ ಸಂಖ್ಯೆ: 169**

**ದಿನಾಂಕ: 20.09.2021 ರಂದು ವಾರ್ಡ್ ಸಂ: 169 ಬೈರಸಂದ್ರ ವಾರ್ಡ್‌ನಲ್ಲಿ ನಡೆದ ವಾರ್ಡ್ ಸಭೆ:**

**ಸಮಿತಿ ಸಭೆಯ ನಡವಳಗಳು**

ಹಾಜರಿದ್ದ ವಾರ್ಡ್ ಸಮಿತಿ ಸದಸ್ಯರು:-

| ಕ್ರಮ ಸಂಖ್ಯೆ | ಹೆಸರು | ಹುದ್ದೆ |
|---|---|---|
| 01 | ಶ್ರೀ ವಾಲೂ ರಾಥೋಡ್ | ಅದ್ಯಕ್ಷರು |
| 02 | ಶ್ರೀ ಚಂದ್ರಶೇಖರ್ ವಿ | ಕಾರ್ಯದರ್ಶಿ ಮತ್ತು ಸಂಚಾಲಕರು |
| 03 | ಶ್ರೀ ನಾಗರಾಜ್ | ಸಹಾಯಕ ಅಭಿಯಂತರರು, ಬೆಸ್ಕಾಂ |
| 04 | ಶ್ರೀ ಸುನಿಲ್ ಕುಮಾರ್ | ಸ,ಕಾ.ನಿ.ಅ, ಬೆಂಗಳೂರು ಜಲ ಮಂಡಳಿ |
| 05 | ಶ್ರೀಮತಿ ಪ್ರೀತಿ | ತಿಲಕ್ ನಗರ ಮಹಿಳಾ ಸಂಘದ ಅದ್ಯಕ್ಷರು |
| 06 | ಶ್ರೀ ಪರಮೇಶ್ವರನ್ | ಎಲ್.ಐ.ಸಿ ಕಾಲೋನಿ ನಿವಾಸಿಗಳ ಸಂಘ |
| 07 | ಶ್ರೀ ಬಾಬು ರಾವ್ | ಎಲ್.ಐ.ಸಿ ಕಾಲೋನಿ ನಿವಾಸಿಗಳ ಸಂಘ |
| 08 | ಶ್ರೀ ಕೆ.ಭಾಸ್ಕರ್ ರೆಡ್ಡಿ | ನಾಗರೀಕರು |
| 09 | ಶ್ರೀ ಟಿ.ಕೆ.ಪರಮೇಶ್ವರನ್ | ನಾಗರೀಕರು |
| 10 | ಶ್ರೀಮತಿ ಕಾಳಮ್ಮ | ನಾಗರೀಕರು |
| 11 | ಶ್ರೀಮತಿ ಲಕ್ಷೀ.ವೈ | ಬೈರಸಂದ್ರ ಮಹಿಳಾ ಸಂಘದ ಅದ್ಯಕ್ಷರು |
| 12 | ಶ್ರೀ ಮಂಜುನಾಥ್ | ಎಲ್.ಐ.ಸಿ ಕಾಲೋನಿ ನಿವಾಸಿಗಳ ಸಂಘ |

ವಾರ್ಡ್: ಸಮಿತಿ ಅಧ್ಯಕ್ಷರು ಸಭೆಗೆ ಹಾಜರಿದ್ದ ಎಲ್ಲಾ ಸದಸ್ಯರು ಮತ್ತು ಅಧಿಕಾರಿ ವರ್ಗದವರಿಗೆ ಸ್ವಾಗತವನ್ನು ಕೋರುತ್ತಾ, ಸಭೆಯನ್ನು ಪ್ರಾರಂಭಿಸಿದರು:

1) ಮಾನ್ಯ ನೋಡಲ್ ಅಧಿಕಾರಿಯವರು ಮಾತನಾಡುತ್ತಾ 06.09.2021 ರಂದು ತಿಳಿಸಿದ ಸಾರ್ವಜನಿಕರು ಮತ್ತು ನೌಕರರು ತಿಳಸಿದ ಸಮಸ್ಯೆಗಳ ಬಗ್ಗೆ ಮಾಹಿತಿ ಪಡೆದುಕೊಂಡರು.
2) ಕೋವಿಡ್-19 ವಿಚಾರವಾಗಿ ಚರ್ಚಿಸಲಾಗಿ, ಕೋವಿಡ್-19 ಪರೀಕ್ಷೆ, ಅದಕ್ಕೆ ಒದಗಿಸು ಉಚಿತ ಔಷದಿಗಳ ಬಗ್ಗೆ, ಡಾ ಎನ್.ಸಿ.ಸಹನಾ ರವರು ಮಾಹಿತಿಯನ್ನು ಒದಗಿಸಿದರು ಹಾಗೂ ಕೋವಿಡ್ ಪ್ರಕರಣಗಳು ಇಳಿಕೆಯಾಗುತ್ತಿರುವ ಬಗ್ಗೆ ಸಭೆಗೆ ಮಾಹಿತಿ ಒದಗಿಸಿದರು.

3) ಕುಡಿಯುವ ನೀರಿನ ಬಗ್ಗೆ ವಿಚಾರಿಸಲಾಗಿ ಯಾವುದೇ ಸಮಸ್ಯವಿಲ್ಲವೆಂದು ಜಲಮಂಡಳ ಅಧಿಕಾರಿಗಳು ಸಭೆಗೆ ತಿಳಿಸಿದರು. ಶ್ರೀ ಪಟೇಲ್ ಮತ್ತು ಶ್ರೀಮತಿ ಕಾಳಮ್ಮ ರವರು ಮಾತನಾಡಿ 18ನೇ ಅಡ್ಡರಸ್ತೆಯಲ್ಲಿ ಓಳಚರಂಡಿ ಚೆಂಬರ್ ಗಳನ್ನು ರಸ್ತೆ ಮಟ್ಟಕ್ಕೆ ಸರಿಪಡಿಸಲು ಕೋರಿದರು, ಹಾಗೂ 10ನೇ ಕ್ರಾಸ್ ಬೈರಸಂದ್ರ, 4ನೇ ಕ್ರಾಸ್ ಎಲ್.ಐ.ಸಿ ಕಾಲೋನಿ ಮತ್ತು ನಕ್ಕಲ್ ಬಂಡೆ ಬಡಾವಣೆಯಲ್ಲಿ ಹೊಸದಾಗಿ ಪೈಪ್ ಲೈನ್ ಅಳವಡಿಸುವುದು ಮತ್ತು ಲೀಕೆಜ್ ಸರಿಪಡಿಸುವುದು ಹಾಗೂ ಡೀಸಿಲ್ಟ್ ಮಾಡಲು ಕೋರಿದರ (ಕ್ರಮ ಶ್ರೀ ಸುನೀಲ್ ಕುಮಾರ್ ಸ.ಅ.ಜಲಮಂಡಳ).

4) ಬೀದಿ ದೀಪಗಳ ನಿರ್ವಹಣೆಗೆ ಬಗ್ಗೆ ಮಾಹಿತಿ ಒದಗಿಸಿದರು.

5) ಶ್ರೀಮತಿ ಕಾಳಮ್ಮರವರು ಮಾತನಾಡಿ ನಕ್ಕಲುಬಂಡು ಮತ್ತು 13ನೇ ಮುಖ್ಯರಸ್ತೆ ಇಲ್ಲಿ ಡೇಬ್ರಿಸ್ ಮತ್ತು ಮಾದಕ ಪದರ್ಥಾಗಳನ್ನು ಹುಡುಗರು ಸೇವಿಸುತ್ತಿದ್ದು ಇದರಿಂದ ಇಲ್ಲಿ ಸಂಚರಿಸುವ ಸ್ಥಳಿಯ ಸಾರ್ವಹಜನಿಕರಿಗೆ ತೊಂದರೆಯಾಗುತ್ತಿರುವ ಬ್ಗಗೆ ಸಭೆಗೆ ತಿಳಿಸಿದರು. ಹಾಗೂ ನಕ್ಕಲುಬಂಡೆ ಪ್ರದೇಶದಲ್ಲಿ ವಿದ್ಯುತ್‌ಗೆ ಹೊಸದಾಗಿ ಕೇಬಲ್ ಅಳವಡಿಸಲು ಬೆಸ್ಕಾಂ ರವರನ್ನು ಕೋರಲಾಯಿತು. (ಕ್ರಮ ಸಹಾಯಕ ಅಭಿಯಂತರರು- ಕಾಮಗಾರಿ ಇಲಾಖೆ, ಪೋಲೀಸ್ ಇಲಾಖೆ, ಬೆಸ್ಕಾಂ).

6) ಶ್ರೀ ಬಾಬು ರಾವ್ ಮತ್ತು ಶ್ರೀ ಪಟೇಲ್ ಚಂದ್ರು ರವರು ಎಲ್.ಐ.ಸಿ. ಕಾಲೋನಿ 1ನೇ ಮೇನ್ ನಲ್ಲಿ ಸಂಖ್ಯೆ 9/1 ಹತ್ತಿರ ಮರದ ಕೊಂಬೆ ಕತ್ತಿರಿಸುವುದು ಹಾಗೂ ಬೈರಸಂದ ಅಂಜನೇಯಾ ದೇವಾಸ್ಥಾನದ ಹತ್ತಿರ ಮರದ ಕೊಂಬೆಯನ್ನು ಕತ್ತರಿಸಿ ಸಿ.ಸಿ.ಟಿ.ವಿ ವೀಕ್ಷಣೆ ಕೋರಲಾಯಿತು (ಕ್ರಮ: ಅರಣ್ಯ ಇಲಾಖೆ).

7) ಶ್ರೀಮತಿ ಲಕ್ಷ್ಮೀ ರವರು ಮಾತನಾಡಿ ಬೈರಸಂದ್ರ ಬಸ್ ಸ್ಟಾಂಡ್ ಹತ್ತಿರ ನಿಂತಿರುವ ವಾಹನಗಳನ್ನು ತೆಗೆಸಿ ಸಾರ್ವಜನಿಕರಿ ಅನುಕೂಲತೆ ಯಾಗುವಂತೆ ಕೋರಿದರು(ಕ್ರಮ: ಸಂಚಾರಿ ಪೋಲೀಸ್).

8) ಕಸ ಸಂಗ್ರಹಹಿಸುತ್ತಿರುವುದು ಸರಿಯಷ್ಟೇ, ಆದರೆ ರಸ್ತೆ ಗುಡಿಸುವುಕೆ ಹಾಗೂ ಔಷಧಿ ಸಿಂಪಡಣೆ ಸೇರಿಯಾಗಿ ಆಗುತಿಲ್ಲವೆಂದು ತಿಳಿಸಿದರು (ಕ್ರಮ ಕಿ.ಆ.ಪ ಮತ್ತು ಹಿ.ಆ.ಪ).

9) ವಾರ್ಡಿನಲ್ಲಿ ಒಟ್ಟು 15 ಆಟೋ ಟಿಪ್ಪರ್ ಮತ್ತು 15 ಕಾರ್ಮಿಕರು, 2 ಕಾಂಪ್ಯಾಕ್ಟರ್ ಜೊತೆಯಲ್ಲಿ 2 ಚಾಲಕರು ಮತ್ತು 2 ಕ್ಲೀನರ್. ಗುತ್ತಿಗೆ ಪೌರಕಾರ್ಮಿಕರು 66 ಮತ್ತು ಪಾಲಿಕೆ ಪೌರಕಾರ್ಮಿಕರು 17 ಇದ್ದು ಒಟ್ಟು ಎಲ್ಲಾ ಸೇರಿದಂತೆ 117 ಕಾರ್ಮಿಕರು ಇರುತ್ತಾರೆಂದು ಹಾಗೂ ಹೆಚ್ಚುವರಿ 1 ಕಾಂಪ್ಯಾಕ್ಟರ್ ಒದಗಿಸಲು ಕಿ.ಆ.ಪ ರಾದ ಶ್ರೀ ರಮೇಶ್ ರವರು ಸಭೆಗೆ ತಿಳಿಸಿರುತ್ತಾರೆ.

10) ಕಲ್ಯಾಣ ಇಲಾಖೆ ವತಿಯಿಂದ 2020-21 ಸಾಲಿನಲ್ಲಿ ಕಾರ್ಯಾಕ್ರಮದ ವಿವರ ಬಗ್ಗೆ ಮಾಹಿತಿ ಲಭ್ಯವಿರುವುದಿಲ್ಲ ಆದ್ದರಿಂದ ಮುಂದಿನ ಸಭೆಗೆ ಸಂಬಂಧಪಟ್ಟ ಅಧಿಕಾರಿಯನ್ನು ಆಹ್ವಾನಿಸಲು ಮಾನ್ಯ ನೋಡಲ್ ಅಧಿಕಾರಿಯವರು ತಿಳಿಸಿದರು.

11) 24.11.2020 ರಂದು ಬೆಳ್ಳಗೆ 10.00ಗಂಟೆಗೆ ಮಾನ್ಯ ನೋಡಲ್ ಅಧಿಕಾರಿಯವರು ಬೆಸ್ಕಾಂ. ಜಲಮಂಡಳಿ. ವಾರ್ಡ್ ಅಭಿಯಂತರರು (ಕಾಮಗಾರಿ ಮತ್ತು ವಿದ್ಯುತ್) ರವರೊಂದಿಗೆ ನಕ್ಕಲುಬಂಡೆಯಲ್ಲಿ ಸ್ಥಳ ತಪಾಸಣಾಗೆ ಸಮಯ ನಿಗಧಿಪಡಿಸಿರುತ್ತಾರೆ.

**ನಿರ್ಣಯ:-** ಈ ವಿಷಯಕ್ಕೆ ಸಮಿತಿಯು ಒಪ್ಪಗೆ ತಿಳಿಸಿರುತ್ತಾರೆ. ವಾರ್ಡ್ ಸಮೀತಿಯ ಮಾರ್ಪಿಡಿತ ಮೇಲೆ ಕಾಣಿಸಿರುವ ಎಲ್ಲಾ ವಿಷಯಗಳನ್ನು ಸಮರ್ಪಕವಾಗಿ ಕೆಲಸ ನಿರ್ವಹಿಸಲು ಸೂಚಿಸಿದರು. ವಾರ್ಡ್ ಸಮಿತಿಯ ಅಧ್ಯಕರು ಸದಸ್ಯರುಗಳಿಗೆ ಹಾಗೂ ಪಾಲಿಕೆ ಅಧಿಕಾರಿಗಳಿಗೆ ವಂದಾನಾರ್ಪಣೆ ತಿಳಿಸುತ್ತಾ ದಿ: 04.11.2021ರಂದು ಬೆಳ್ಳಗೆ 10.30ಗಂಟೆಗೆ ಮತ್ತೆ ಸಭೆ ಸೇರಲು ಹಾಗೂ ಆ ಸಭೆಯಲ್ಲಿ ವಾರ್ಡ್‌ಗೆ ಸಂಬಂಧಪಟ್ಟ ಅಧಿಕಾರಿಗಳು ಸಭೆ ಹಾಜರಾಗುವಂತೆ, ಪತ್ರ ಕಳುಹಿಸುವಂತೆ ತಿಳಿಸಿದರು .

**ಕಾರ್ಯದರ್ಶಿ ಮತ್ತು ಸಂಚಾಲಕರು**
**ಹೆಸರು: ವಿ. ಚಂದ್ರಶೇಖರ್**
**ಸಹಾಯಕ ಅಭಿಯಂತರರು**